# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1049 |
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ವಿಷಯ | ರಾಮನಗರ ರೇಷ್ಮೆ ಮಾರುಕಟ್ಟೆಯ ಅಧಿಕಾರಿಗಳ ಅವ್ಯವಹಾರದ ಬಗ್ಗೆ |
| ಉತ್ತರಿಸುವ ದಿನಾಂಕ | 24-02-2023 |
| ಉತ್ತರಿಸುವವರು | ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯ ರೇಷ್ಮೆ ಉಪ ನಿರ್ದೇಶಕರು, ದಿನಾಂಕ: 19.03.2021 ರಂದು 569 ರೇಷ್ಮೆ ಬೆಳೆಗಾರರು ಮಾರಾಟ ಮಾಡಿದ ಗೂಡಿನ ವಹಿವಾಟಿನ ಮೊತ್ತ ರೂ.200 ಲಕ್ಷ (ಇನ್ನೂರು ಲಕ್ಷ) ಗಳನ್ನು ಸ್ವಂತಕ್ಕೆ ಬಳಸಿಕೊಂಡಿರುವುದು ನಿಜವೇ: (ವಿವರ ನೀಡುವುದು) | ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರದಲ್ಲಿ ರೇಷ್ಮೆ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ, ಶ್ರೀ ಜೆ.ಎಂ.ಮುನ್ನಿಬಸಯ್ಯ, ರೇಷ್ಮೆ ಉಪ ನಿರ್ದೇಶಕರು (ಅಮಾನತ್ತು) ರವರು ದಿನಾಂಕ:19/3/2021 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ಆನ್ ಲೈನ್ ಮೂಲಕ 569 ರೇಷ್ಮೆ ಬೆಳೆಗಾರರು ಮಾರಾಟ ಮಾಡಿದ ರೇಷ್ಮೆ ಗೂಡಿನ ಮೌಲ್ಯ ರೂ.2,36,33,801/-ಗಳನ್ನು ಪಾವತಿಸದೆ ಕರ್ತವ್ಯಲೋಪವೆಸಗ್ಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಹಾಗಿದ್ದಲ್ಲಿ, ರಾಜ್ಯದ ರೇಷ್ಮೆ ಬೆಳೆಗಾರರಿಗೆ ಜಾಗತಿಕ ವಿದ್ಯಾಮಾನದಿಂದ ರೇಷ್ಮೆ ದಾರಕ್ಕೆ ಬೆಲೆ ಕುಸಿತ ಉಂಟಾದಲ್ಲಿ, ರೇಷ್ಮೆ ಗೂಡಿನ ದರ ಕುಸಿತ ಉಂಟಾಗುವುದರಿಂದ ರೇಷ್ಮೆ ಬೆಳೆಗಾರರರ ಆರ್ಥಿಕ ಹಿತದೃಷ್ಟಿಯಿಂದ ಬೆಂಬಲ ಬೆಲೆ ಪ್ರೋತ್ಸಾಹ ಧನ ಘೋಷಿಸಿ ಮೀಸಲಿಟ್ಟಿರುವ ಮೊತ್ತದಲ್ಲಿ ಸರ್ಕಾರದ ಶಿಫಾರಸ್ಸಿನಂತೆ ಅಮಾನತ್ತುಗೊಂಡಿರುವ ಭ್ರಷ್ಟ ಅಧಿಕಾರಿಗಳಿಗೆ ಪ್ರೋತ್ಸಾಹಿಸುವ ಹಿತದೃಷ್ಟಿಯಿಂದ ಈ ಯೋಜನೆಯ ಹಣವನ್ನು ಪರಿವರ್ತಿಸಿ ರೇಷ್ಮೆ ಉಪ ನಿರ್ದೇಶಕರು ರಾಮನಗರ ಮಾರುಕಟ್ಟೆ ಇವರ ಖಾತೆಗೆ ದಿನಾಂಕ 26.03.2023 ರಲ್ಲಿ ವರ್ಗಾಯಿಸಿ ಆದೇಶಿಸಿರುವುದು ನಿಜವೇ: (ವಿವಿರ ನೀಡುವುದು) | ರೇಷ್ಮೆ ದಾರಕ್ಕೆ ಬೆಲೆ ಕುಸಿತ ಉಂಟಾದಾಗ ರೇಷ್ಮೆ ಗೂಡಿನ ಧಾರಣೆ ಕುಸಿತಗೊಂಡ ಸಂದರ್ಭದಲ್ಲಿ ಸರ್ಕಾರವು ಮಧ್ಯ ಪ್ರವೇಶಿಸಿ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ.<br>ಅದರಂತೆ 2020-21ನೇ ಅವಧಿಯಲ್ಲಿ ರಾಮನಗರ ಮಾರುಕಟ್ಟೆಗೆ ಪ್ರೋತ್ಸಾಹಧನದ ಮೊತ್ತದಲ್ಲಿ ಉಳಿಕೆ ಇದ್ದ ರೂ.447.07 ಲಕ್ಷಗಳಲ್ಲಿ ರೂ.200 ಲಕ್ಷಗಳನ್ನು ರೇಷ್ಮೆ ಬೆಳೆಗಾರರ ಹಿತದೃಷ್ಟಿಯಿಂದ ಸರ್ಕಾರಕ್ಕೆ ಮರುಪಾವತಿಸುವ ಷರತ್ತಿಗೊಳಪಟ್ಟು ರೇಷ್ಮೆ ಉಪ ನಿರ್ದೇಶಕರು ರಾಮನಗರ ರವರ ಖಾತೆಗೆ ವರ್ಗಾಯಿಸಿ ರೇಷ್ಮೆ ಬೆಳೆಗಾರರಿಗೆ ಗೂಡು ಮಾರಾಟ ಮಾಡಿದ್ದ ಬಾಕಿ ಮೊತ್ತವನ್ನು ಪಾವತಿಸಲು ಕ್ರಮ ವಹಿಸಿದೆ.<br>ಅಮಾನತ್ತುಗೊಂಡಿರುವ ಅಧಿಕಾರಿಗೆ ಪ್ರೋತ್ಸಾಹಿಸುವ ಪ್ರಮೇಯವು ಸರ್ಕಾರಕ್ಕೆ ಇರುವುದಿಲ್ಲ. ರೇಷ್ಮೆ ಬೆಳೆಗಾರರ ಹಿತದೃಷ್ಟಿಯಿಂದ ಕ್ರಮವಹಿಸಲಾಗಿರುತ್ತದೆ. ಜೆ.ಎಂ. ಮುನ್ನಿಬಸಯ್ಯ, ರೇಷ್ಮೆ ಉಪ ನಿರ್ದೇಶಕರು (ಅಮಾನತ್ತು) ರವರು ದಿನಾಂಕ:19/3/2021 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ರಾಮನಗರ ಐಜೂರು ಪೋಲೀಸ್ ಠಾಣೆಯಲ್ಲಿ **204, 409, 420, 201. IPC** ಕಲಂಗಳಡಿ ದಾಖಲಿಸಲಾಗಿದ್ದು, ಪ್ರಕರಣದ ದೋಷಾರೋಪ ಪಟ್ಟಿಯನ್ನು ಪೋಲೀಸರು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. |

| | | |
|---|---|---|
| | | ರೇಷ್ಮೆ ಉಪ ನಿರ್ದೇಶಕರು, ರಾಮನಗರ ರವರು ರೀಲರುಗಳಿಂದ ವಸೂಲು ಮಾಡಿದ ಮೊತ್ತ ರೂ.78,59,000/-ಗಳನ್ನು ದಿನಾಂಕ;5/8/2021ರ ಚೆಕ್ ಸಂ:001227 ಮೂಲಕ ಸರ್ಕಾರಕ್ಕೆ ಜಮೆ ಮಾಡಿದೆ. ಉಳಿಕೆ ಮೊತ್ತ ರೂ.1,21,41000/-ಗಳನ್ನು ಜಮೆ ಮಾಡಬೇಕಾಗಿರುತ್ತದೆ.<br>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಘನ ನ್ಯಾಯಾಲಯ ರಾಮನಗರದಲ್ಲಿ ಆರೋಪಿತರ ಮೇಲೆ ಪ್ರಕರಣವು ಆರೋಪಗಳ(CHARGES) ಹಂತದಲ್ಲಿದ್ದು ಮುಂದಿನ ದಿನಾಂಕ: 12/4/2023 ಕ್ಕೆ ಮುಂದೂಡಲ್ಪಟ್ಟಿದೆ. |
| (ಇ) | ಕಳೆದ ಅಧಿವೇಶನದಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಭರವಸೆ ನೀಡಿದ್ದು , ಅದರಂತೆ ಸರ್ಕಾರಿ ಹಣವನ್ನು ವಸೂಲಿ ಮಾಡಿ ಜಮಾ ಮಾಡಲು ಕ್ರಮ ವಹಿಸುವುದೇ: ಹಾಗಿದ್ದಲ್ಲಿ ಎಷ್ಟು ಕಾಲಾವಕಾಶ ಬೇಕಾಗುತ್ತದೆ: (ವಿವರ ನೀಡುವುದು) | ಪ್ರಕರಣದ ಕುರಿತು ಇಲಾಖಾ ಹಿರಿಯ ಅಧಿಕಾರಿಗಳ ತಂಡ ಮತ್ತು ಇಲಾಖಾ ಆಡಿಟ್ ತಂಡ ರಚಿಸಿ ವರದಿ ಪಡೆಯಲಾಗಿದೆ. ವಿದ್ಯುನ್ಮಾನ ಯಂತ್ರಗಳನ್ನು ನಾಶಪಡಿಸಿರುವ ಹಿನ್ನಲೆಯಲ್ಲಿ ಸ್ಪಷ್ಟ ವರದಿ ಪಡೆಯಲು ವಿಳಂಬವಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಘನ ನ್ಯಾಯಾಲಯ, ರಾಮನಗರ ಮತ್ತು ನಿವೃತ್ತ ಜಿಲ್ಲಾ ನ್ಯಾಯಾಧೀಶರು ರವರ ನೇತೃತ್ವದಲ್ಲಿ ಇಲಾಖಾ ವಿಚಾರಣೆ ನಡೆಯುತ್ತಿದೆ. ಮಹಾಲೇಖಪಾಲರು, ಕರ್ನಾಟಕ ರವರಿಂದ ಆಡಿಟ್ ನಿರ್ವಹಿಸುವಂತೆ ಕೋರಿರುವುದಕ್ಕೆ ರಾಮನಗರ ಮಾರುಕಟ್ಟೆಯ ಆಡಿಟ್ ನಿರ್ವಹಿಸಿದ್ದು, ವರದಿ ನಿರೀಕ್ಷಿಸಿದೆ. ಸರ್ಕಾರದ ಹಂತದಲ್ಲಿ ರಾಮನಗರ ಮಾರುಕಟ್ಟೆಯ ಇ-ಹಣ ಪಾವತಿಯ ವ್ಯತ್ಯಾಸಗಳ ಕುರಿತು ಪತ್ತೆಹಚ್ಚಲು ಸಭೆಗಳನ್ನು ನಡೆಸಿ ಎಲ್ಲಾ ಮೂಲಗಳ ಅವಶ್ಯ ದಾಖಲಾತಿಗಳನ್ನು ಸಂಗ್ರಹಿಸಿ ವಿಶೇಷ ಆಡಿಟ್ ತಂಡ ರಚನೆ ಮಾಡಿ ಪ್ರಕರಣದ ಸ್ಪಷ್ಟಾಸ್ಪಷ್ಟತೆಯನ್ನು ಪತ್ತೆಹಚ್ಚಿ ಹಣ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಮತ್ತು ಪ್ರಕರಣದಲ್ಲಿ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ತೀರ್ಪು ಬಂದ ತಕ್ಷಣ ವಿಳಂಬವಿಲ್ಲದೆ ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಕ್ರಮ ವಹಿಸಲಾಗುವುದು. |

**ಕಡತ ಸಂಖ್ಯೆ: ರೇಷ್ಮೆ 35 ರೇಕೃವಿ 2023**

**(ಡಾ. ನಾರಾಯಣಗೌಡ)**
**ರೇಷ್ಮೆ, ಯುವ ಸಬಲೀಕರಣ ಮತ್ತು**
**ಕ್ರೀಡಾ ಸಚಿವರು**